ಮಾಗಡಿ ತಾಲ್ಲೂಕಿನಲ್ಲಿ ಖಾಸಗಿ ಬಸ್ಸುಗಳ ಸಂಚಾರ

೩೦೦. ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾಗಡಿ ತಾಲ್ಲೂಕಿನಲ್ಲಿರುವ ಅಜ್ಜನ ಹಳ್ಳಿಗೆ ಬೆಂಗಳೂರು, ಕೂಣಿಗಲ್ ಹಾಗೂ ರಾಮನಗರ ಗಳಿಂದ ಖಾಸಗಿ ಬಸ್ಸುಗಳ ಸಂಚಾರಕ್ಕೆ ಪರವಾನಿಗೆ ನೀಡಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಹಾಲಿ ಸಂಚರಿಸುತ್ತಿರುವ ವಾಹನಗಳ ಸಂಖ್ಯೆ ಎಷ್ಟು ?

ಇ) ಖಾಸಗಿ ಬಸ್ಸುಗಳು ಮೇಲ್ಕಂಡ ಮಾರ್ಗದಲ್ಲಿ ವೇಳಾಪಟ್ಟಿಯ ಮೇರೆಗೆ ಸಂಚರಿಸುತ್ತಿಲ್ಲ ದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ, ಖಾಸಗಿ ಬಸ್ಸುಗಳಿಗೆ ನೀಡಿರುವ ಪರವಾನಿಗೆಯನ್ನು ರದ್ದುಗೊಳಿಸಿ ಸದರಿ ಮಾರ್ಗದಲ್ಲಿ ಸರ್ಕಾರಿ ಬಸ್ಸನ್ನು ಓಡಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರಿ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸರಬರಾಜು, ಮಂತ್ರಿ ಸಾರಿಗೆ ರಾಜ್ಯ ಸಚಿವರು).—

ಅ) ಹೌದು.

ಆ) ೬.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಹೆಚ್. ಎಂ. ರೇವಣ್ಣ.—ಸನ್ಮಾನ್ಯ ಸಭಾಧ್ಯಕ್ಷರೇ, ಮಾಗಡಿ ತಾಲ್ಲೂಕಿನ ಅಜ್ಜನಹಳ್ಳಿಗೆ ೬ ಬಸ್‌ಗಳಿಗೆ ಪರ್ಮಿಟ್ ಕೊಟ್ಟಿರುವುದು ಸರಿಯಷ್ಟೆ. ಆದರೆ ಇವುಗಳಲ್ಲಿ ೨ ಖಾಸಗಿ ಬಸ್‌ಗಳು ಮಾತ್ರ ಓಡುತ್ತಿವೆ ಇನ್ನುಳಿದ ೪ ಬಸ್‌ಗಳು ಓಡುತ್ತಿಲ್ಲ ಇದರಿಂದ ಜನಗಳಿಗೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಕ್ರಮ ಏನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎರಡು ಬಸ್‌ಗಳು ಮಾತ್ರ ಓಡುತ್ತಿವೆ, ಬೇರೆ ೪ ಬಸ್‌ಗಳು ಓಡುತ್ತಿಲ್ಲವೆಂದು ಹೇಳಿದ್ದಾರೆ. ಇವತ್ತೇ ನಮ್ಮ ಆರ್.ಟಿ.ಓ. ಅವರಿಗೆ ಇದರ ವಿಚಾರದಲ್ಲಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಕೊಡುತ್ತೇನೆ.

ಬೀದರ್ ಜಿಲ್ಲೆಯಲ್ಲಿ ಕ.ರಾ.ರ.ಸಾ. ಸಂಸ್ಥೆ ಬಸ್ಸುಗಳು ಸಾಕಷ್ಟು ಇಲ್ಲದಿರುವುದು

೩೮೨. ಶ್ರೀ ನಾರಾಯಣರಾವ್ ಮನಹಳ್ಳಿ, (ಬೀದರ್).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಕರಣಕ್ಕೆ ಮೊದಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಖಾಸಗಿ ವಾಹನ ಮಾಲೀಕರು ಬೀದರ್ ಜಿಲ್ಲೆಯಲ್ಲಿ ಓಡಿಸುತ್ತಿದ್ದ ಷೆಡ್ಯೂಲ್‌ಗಳ ಸಂಖ್ಯೆ ಎಷ್ಟು?

ಆ) ಕ.ರಾ.ರ.ಸಾ. ಸಂಸ್ಥೆಯಲ್ಲಿ ಇರುವ ವಾಹನಗಳ ಬಲವು ಈ ಜಿಲ್ಲೆಯ ಪ್ರಯಾಣಿಕರಿಗೆ ಇರುವ ಅವಶ್ಯಕತೆಯನ್ನು ಪೂರೈಸುತ್ತದೆಯೇ?

ಇ) ಹಾಗಿಲ್ಲದಿದ್ದಲ್ಲಿ, ಸರ್ಕಾರವು ಈ ವಿಷಯದಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳೇನು?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ಸಚಿವರು).—

ಅ) ಷೆಡ್ಯೂಲ್‌ಗಳ ಸಂಖ್ಯೆ ಈ ಕೆಳಕಂಡಂತಿದೆ

ಕೆ.ಎಸ್.ಆರ್.ಟಿ.ಸಿ	ಖಾಸಗಿ ವಾಹನ ಮಾಲೀಕರು
೮೦	೬೦ (ರೌಂಡ್ ಟ್ರಿಪ್‌ಗಳು)

ಆ) ಹೌದು.

ಇ) ಉದ್ಭವಿಸುವುದಿಲ್ಲ.

ಶ್ರೀ ನಾರಾಯಣರಾವ್ ಮನಹಳ್ಳಿ.—ಸನ್ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಕರಣವಾಗುವುದಕ್ಕಿಂತ ಮೊದಲು ಬಸ್‌ಗಳ ಸಂಖ್ಯೆಯನ್ನು ಹೇಳುತ್ತಾ. ಅದರಲ್ಲಿ ೮೦ ಸರ್ಕಾರಿ ಬಸ್‌ಗಳು ಇದ್ದವು ಮತ್ತು ಖಾಸಗಿ ಬಸ್‌ಗಳು ೬೦ ಇದ್ದವೆಂದು ಹೇಳಿದ್ದಾರೆ. ಅಂದರೆ ಎರಡೂ ಕೂಡಿಸಿದರೆ ೧೪೦ ಬಸ್‌ಗಳು ನಮ್ಮ ಜಿಲ್ಲೆಯಲ್ಲಿ ಇರಬೇಕು. ಆದರೆ, ಈಗ ಅಷ್ಟು ಬಸ್‌ಗಳು ಇಲ್ಲ. ಅದರ ಸಲುವಾಗಿ ನಮ್ಮ ಜಿಲ್ಲೆಯ ಪ್ರಯಾಣಿಕರು ಬಹಳಷ್ಟು ತೊಂದರೆಗೆ ಈಡಾಗಿದ್ದಾರೆ. ಆದರೆ ಇಲ್ಲಿ ಉತ್ತರಿಸಿದಂತಹ ಉತ್ತರದಲ್ಲಿ ಅವರು ಯಾವುದೇ ಪ್ರಯಾಣಿಕರಿಗೆ ತೊಂದರೆಯೂ ಆಗುತ್ತಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದಾರೆ. ಆದರೆ ಪ್ರಯಾಣಿಕರು ಬಸ್ ಸೀಟು ಮೇಲೆ ಕುಳಿತಲ್ಲದೆ ಬಸ್ ಟಾಪ್ ಮೇಲೂ ಕುಂತು ಪ್ರಯಾಣ ಮಾಡತಕ್ಕಂಥ ಕೆಟ್ಟ ಪರಿಸ್ಥಿತಿ ಎಲ್ಲಾ ರೂಟ್‌ಗಳಲ್ಲಿ ಕಾಣುತ್ತಿದ್ದೇವೆ. ಆದರ ಸಲುವಾಗಿ ತಾವು ಇಲ್ಲಿ ಕೊಟ್ಟಂಥ ಉತ್ತರ ಬಹುಶಃ ಸಮಂಜಸವಲ್ಲವೆಂದು ಹೇಳಿ ಈ ತೊಂದರೆ ನಿವಾರಿಸತಕ್ಕ ಯಾವುದಾದರು ವ್ಯವಸ್ಥೆಯನ್ನು ಮಾಡಂತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಬೀದರ್‌ನಲ್ಲಿ ೮೫ನೇ ನವೆಂಬರ್ ೭ನೇ ತಾರೀಖು ರಾಷ್ಟ್ರೀಕರಣ ಮಾಡುವಂಥ ಸಂದರ್ಭದಲ್ಲಿ ಕೆ.ಎಸ್.ಆರ್.ಟಿ.ಸಿ.ಯವರ ಬಸ್‌ಗಳು ೮೦ ಹಾಗೂ ಪ್ರೈವೇಟ್‌ನವರದ್ದು ೬೦ ಬಸ್‌ಗಳು ಓಡುತ್ತಿದ್ದವು. ಇವೊತ್ತು ರಾಷ್ಟ್ರೀಕರಣವಾದ ಮೇಲೆ ಕೆ. ಎಸ್. ಆರ್. ಟಿ. ಸಿ. ಯವರು ಸುಮಾರು ೨೨೬ ಬಸ್‌ಗಳನ್ನು ಇವತ್ತು ಬೀದರ್ ಜಿಲ್ಲೆಯಲ್ಲಿ ಓಡಿಸುತ್ತಿದ್ದಾರೆ. ಈಗ ನಮ್ಮ ಪ್ರಕಾರ ಸಾಕಷ್ಟು ಬಸ್‌ಗಳು ಇವೆ. ಆದರೂ ಕೆಲವು ಸಂದರ್ಭಗಳಲ್ಲಿ ಅನಿವಾರ್ಯವಾಗಿ ನಾವು ಬಸ್ ಶೆಡ್ಯೂಲ್‌ಗಳನ್ನು ಕ್ಯಾನ್ಸಲ್ ಮಾಡುವಂಥ ಸಂದರ್ಭ ಬರುತ್ತದೆ. ಕೆಲವು ಸಾರಿ ನೌಕರರ ಅನ್ ಆಥರೈಸ್ಡ್ ಅಬ್ಸೆಂಟ್ ಇರುತ್ತದೆ. ಕೆಲವು ಸಾರಿ ಬ್ರೇಕ್ ಡೌನ್ ಇರುತ್ತದೆ. ಈ ರೀತಿಯಾಗಿ ಹಲವಾರು ಕಾರಣಗಳಿಂದಾಗಿ ಬಸ್ ಪ್ರಯಾಣಿಕರಿಗೆ ತೊಂದರೆಯಾಗುತ್ತಾ, ಇರುವುದು ಸರಕಾರದ ಗಮನಕ್ಕೆ ಬಂದಿದೆ. ಅದನ್ನು ಸರಿಮಾಡುವುದಕ್ಕೆ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್‌ಗೆ ಒಂದು ಸರ್ವೆ ಮಾಡಲು ಈಗಾಗಲೇ ಹೇಳಿದ್ದೇನೆ. ಆದರ ವರದಿ ಬರುವುದಿದ್ದು, ಅದು ಬಂದ ಮೇಲೆ ಸಾಕಷ್ಟು ಪ್ರಯತ್ನಗಳನ್ನು ಈ ದಿಶೆಯಲ್ಲಿ ಕೈಗೊಳ್ಳಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ನಾರಾಯಣರಾವ್ ಮನಹಳ್ಳಿ.—ನಮ್ಮ ಜಿಲ್ಲೆಯಲ್ಲಿ ಸುಮಾರು ೫೦ ಹಳ್ಳಿಗಳಲ್ಲಿ ಇಂಥ ಒಂದು ಪರಿಸ್ಥಿತಿಯು ಇದೆ. ಜನರು ಹೋಗ ಬೇಕಾದ ಸ್ಥಳಗಳಿಗೆ ಬಸ್ ಸೌಲಭ್ಯ ಇಲ್ಲ. ಆದರ ಸಲುವಾಗಿ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

ಶ್ರೀ ಕೆ.ಜೆ. ಜಾರ್ಜ್.—ಈಗಾಗಲೇ ಹೇಳಿರುವಂತೆ ಮಾನ್ಯ ಸದಸ್ಯರ ಸಲಹೆಗಳನ್ನು ಗಮನದಲ್ಲಿಟ್ಟು ಕೊಂಡು ಆದಷ್ಟು ಜಾಗ್ರತೆ ಇದನ್ನೆಲ್ಲಾ ಸುಧಾರಿಸಲಿಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಅಧ್ಯಕ್ಷರೇ ಬಸ್‌ಗಳ ಟಾಪ್ ಮೇಲೆ ಪ್ರಯಾಣ ಮಾಡುವುದಾದ್ದು ಎಲ್ಲಾ ಕಡೆಗಳಲ್ಲಿ ಇದ್ದರೂ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿಗೆ ಇದೆ. ಆದುದರಿಂದ ಅದನ್ನು ನಿವಾರಿಸಲು ಬೆಂಗಳೂರಿನ ಡಬ್ಬಲ್ ಡೆಕ್ಕರ್ ಬಸ್‌ನ್ನು ನಮ್ಮಲ್ಲಿಗೆ ಕಳುಹಿಸುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್.—ಬಸ್‌ನ ಟಾಪ್ ಮೇಲೆ ಕುಳಿತುಕೊಂಡು ಹೋಗುವುದು ಇವೊತು ನಿನ್ನೆಯ ಸಮಸ್ಯೆಯಲ್ಲ. ಬಹಳ ವರ್ಷಗಳಿಂದಲೂ ಈ ಸಮಸ್ಯೆಯು ಸಮಸ್ಯೆಯಾಗಿಯೇ ಉಳಿದಿದೆ. ಈ ಸಮಸ್ಯೆಯನ್ನು ಪರಿಹಾರ ಮಾಡಬೇಕಾದರೆ ಸೂಕ್ತ ಕ್ರಮವನ್ನು, ಆದಷ್ಟು ಜಾಗ್ರತೆ ನಾವು ತೆಗೆದುಕೊಳ್ಳಬೇಕಾಗಿದೆ. ಈ ವಿಚಾರದಲ್ಲಿ ಸರಕಾರದವರು ಮುಂದೆ ಒಂದು ಸಾರಿಗೆ ನೀತಿಯನ್ನು ಪ್ರಕಟಿಸುವವರಿದ್ದೇವೆ. ಆದರಲ್ಲಿ ಈ ತರಹದ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ.ಜಿ ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ. ಬೀದರ್. ಗುಲ್ಬರ್ಗ, ರಾಯಚೂರು,ಜಿಲೆ ಗಳ ಬಸ್ ಮಾರ್ಗಗಳ ರಾಷ್ಟ್ರೀಕರಣವಾದಾಗ ನಮ್ಮ ಸರಕಾರ ಇತ್ತು ಮತ್ತು ನಾನು ಸಾರಿಗೆ ಮಂತ್ರಿ ಯಾಗಿದ್ದೆ.ವಿಶೇಷವಾಗಿ ಬೀದರ್.ಗುಲ್ಬರ್ಗ ಕಡೆಯ ಕೆಎಸ್‌ಆರ್‌ಟಿಸಿಯ ಅಧಿಕಾರಿಗಳು ಮಾನ್ಯ ಸಚಿವರಿಗೆ ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲ ಎಂದು ಕಾಣುತ್ತದೆ. ತಾವುಗಳು ೪ ಭಾಗಕ್ಕೆ ಒಮ್ಮೆ ಹೋಗಿ ನೋಡಿಕೊಂಡು ಬರಬೇಕು ಕಳೆದ ಐದೆರಡು ವರ್ಷಗಳಲ್ಲಿ ರಾಷ್ಟ್ರೀಕರಣ ಆದಮೇಲೆ ಆರು ತಿಂಗಳ ಕಾಲ ಸ್ವಲ್ಪ ಉತ್ತಮವಾಗಿತ್ತು ಸಾರಿಗೆ ಸಂಸ್ಥೆಯ ಸರ್ವಿಸ್ ಕೂಡ ಸ್ವಲ್ಪ ಉತ್ತಮವಾಯಿತು. ಆದರೂ ಖಾಸಗಿಯವರು ಪರ್ಮಿಟ್ ಇಲ್ಲದೇ ಸಾಕಷ್ಟು ಟ್ರಿಪ್‌ಗಳನ್ನು ಓಡಿಸುತ್ತಾ ಇದ್ದರು. ಈ ಬಗ್ಗೆ ಸರಕಾರದ ಮಾಹಿತಿಗೆ ಆರ್‌ಟಿಒ ದವರು ಕೊಟ್ಟಿರುವ ವಿವರಗಳು ನಿಜ ಆದರೆ ಆದಕ್ಕಿಂತ ಹೆಚ್ಚಿಗೆ ಟ್ರಿಪ್‌ಗಳನ್ನು ಅಲ್ಲಿ ಖಾಸಗಿಯವರು ಓಡಿಸುತ್ತಾ ಇದ್ದರು. ಆದುದರಿಂದ ಕೆ.ಎಸ್.ಆರ್.ಟಿ.ಸಿ.ಯವರು ಏನು ಮಾಡಿದ್ದಾರೆ ಅಂದರೆ ಆಫೀಶಿಯಲ್

ಆಗಿ ಆರ್ಟಿಓದವರು ಎಷ್ಟು ಪರ್ಮಿಟ್‌ಕೊಟ್ಟಿದ್ದಾರೆ ಅಷ್ಟು ಮಾತ್ರ ಓಡಿಸುತ್ತಿದ್ದಾರೆ. ಇದರಿಂದ ಪರಿಸ್ಥಿತಿಯು ಕಳೆದ ಒಂದು ವರ್ಷದಲ್ಲಿ ಬಹಳ ಹದಗೆಟ್ಟಿದೆ. ತಮಗೆ ಅಧಿಕಾರಿಗಳು ಕೊಟ್ಟಿರತಕ್ಕಂಥ ಅಂಕಿ ಅಂಶಗಳು ಸತ್ಯಕ್ಕೆ ದೂರವಾದುದೇ. ಅಧಿಕಾರಿಗಳು ಕೊಟ್ಟಿರುವುದನ್ನು ತಾವು ಹೇಳಿದ್ದೀರಿ. ತಾವುಗಳು ಅಧಿವೇಶನ ಮುಗಿದ ನಂತರ ಆ ಭಾಗಗಳಿಗೆ ಹೋಗಿ ಸ್ವತಃ ನೋಡಿಕೊಂಡು ವಿಷಯದ ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಅನೇಕ ಮಾರ್ಗಗಳಿಗೆ ಹೋಗುತ್ತಿದ್ದಂಥ ಬಸ್‌ಗಳು ಕೂಡ ನಿಂತು ಹೋಗಿವೆ, ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ ತಮ್ಮನ್ನು ಕೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಅಧ್ಯಕ್ಷರೇ ಸನ್ಮಾನ್ಯ ಉಪ ನಾಯಕರು ಹೇಳಿದಂಥ ವಿಚಾರಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಅಧಿವೇಶನ ಮುಗಿದ ಮೇಲೆ ಅಲ್ಲಿಯ ಪ್ರವಾಸವನ್ನು ಕೈಗೊಳ್ಳುತ್ತೇನೆ. ಆದರೆ ಅಲ್ಲಿರುವುದು ಸಾವಾನ್ಯವಾದ ಸಮಸ್ಯೆಯಲ್ಲ, ಇದನ್ನು ಬಗೆಹರಿಸುವ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿದೆ. ಅದಕ್ಕೆ ಮಾನ್ಯ ವಿರೋಧಿ ಪಕ್ಷದವರ ಬೆಂಬಲ ಕೂಡ ಬೇಕಾಗಿದೆ, ಕೆಲವೊಂದು ವಿಚಾರದಲ್ಲಿ ಎಲ್ಲರ ಸಹಕಾರ ಅಗತ್ಯವಾಗಿದೆ. ನಾವು ವಿದ್ಯಾರ್ಥಿಗಳಿಗೆ ಬಸ್ ಪಾಸ್‌ನ್ನು ಕೊಟ್ಟಿದ್ದೇವೆ. ಇದರಲ್ಲಿ ಯಾವುದೇ ನಿಬಂಧನೆಗಳು ಇಲ್ಲ. ಬೆಳಿಗ್ಗೆಯಿಂದ ಸಾಯಂಕಾಲದ ವರೆಗೆ ಬೇಕಾದಷ್ಟು ಬಾರಿ ತಿರುಗಾಡಬಹುದು. ಅದನ್ನು ಬದಲಾಯಿಸಿ ಶಾಲೆಗೆ ಹೋಗಲು ಮಾತ್ರ ಆ ಸಮಯಕ್ಕೆ ಒಳಪಟ್ಟು ಮಾಡಿದರೆ ಬಹಳಷ್ಟು ಅನುಕೂಲವಾಗುತ್ತದೆ ಈಗ ಸಂಜೆ ಶಾಲಾ ಕಾಲೇಜುಗಳಿಗೂ ನಾವು ಪಾಸ್ ಕೊಡುತ್ತಿದ್ದೇವೆ. ಕೆಲವೊಂದು ಬಾರಿ ಅನಧಿಕೃತ ಗೈರು ಹಾಜರಿಯು ಸಿಬ್ಬಂದಿ ವರ್ಗದಿಂದ ಇರುವುದರಿಂದ ಎಷ್ಟೋ ಟ್ರಿಪ್‌ಗಳನ್ನು ನಿಲ್ಲಿಸುವ ಬದಲಾಯಿಸುವ ಸಂದರ್ಭವೂ ಒದಗುತ್ತದೆ, ಡ್ರೈವರ್ ಕಂಡಕ್ಟರ್ ಬರುವುದಿಲ್ಲ, ಇವೇ ಮುಂತಾದ ಹಲವಾರು ಸಮಸ್ಯೆಗಳಿಗೆ ತಮ್ಮೆಲ್ಲರ ಸಹಕಾರ ಪಡೆದು ಇದಕ್ಕೆ ಹಾಗೂ ವಿದ್ಯಾರ್ಥಿ ಸಂಘಗಳವರ ಮತ್ತು ಟ್ರೇಡ್ ಯೂನಿಯನ್‌ರವರ ಸಲಹೆ ಪಡೆದು ಪರಿಹಾರವನ್ನು ಕಂಡುಕೊಂಡು ಕಟ್ಟು ನಿಟ್ಟಾದ ಶಿಸ್ತನ್ನು ರೂಢಿಸಿಕೊಂಡು ಹೋಗುವ ಕಡೆಗೆ ಗಮನ ಕೊಡಬೇಕಾಗಿದೆ. ಇದರಿಂದ ನಮಗೆ ಹೆಚ್ಚಿನ ಆದಾಯ ಬಂದರೆ ಇನ್ನು ಹೆಚ್ಚಿನ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ ಇದಕ್ಕೆ ವಿರೋಧ ಪಕ್ಷದವರೂ ಸಹ ನಮ್ಮ ಜೊತೆ ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ

ಹೊಸದಾಗಿ ಪಡಿತರ ಚೀಟಿಯನ್ನು ವಿತರಣೆ ಬಗ್ಗೆ

ಳಿಖಿ. ಶ್ರೀ ಕಮರುಲ್ ಇಸ್ಲಾಮ್ (ಗುಲ್ಬರ್ಗಾ).—ಮಾನ್ಯ ಆಹಾರ ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಲ್ಬರ್ಗಾದಲ್ಲಿ ಪಡಿತರ ಚೀಟಿ ಇಲ್ಲದೆ ಇರುವವರಿಗೆ ಹೊಸದಾಗಿ ಪಡಿತರ ಚೀಟಿಯನ್ನು ವಿತರಣೆ ಮಾಡುತ್ತಿರುವುದಿಲ್ಲವೆಂಬ ಅಂಶ ನಿಜವೆ? ಹಾಗಿದ್ದಲ್ಲಿ ಕಾರಣಗಳೇನು?

ಆ) ಹಾಗಿದ್ದಲ್ಲಿ ಪಡಿತರ ಚೀಟಿ ನೀಡಲು ಬೇಕಾಗುವ ಕಾಲಾವಕಾಶವೇನು?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸಚಿವರು).—

ಅ) ಹೌದು ಗುಲ್ಬರ್ಗಾ ಜಿಲ್ಲಾಧಿಕಾರಿಯವರು ಪಡಿತರ ಚೀಟಿ ಹೊಂದದೇ ಇರುವ ಬಹಳಷ್ಟು ಜನರಿಂದ ಮನವಿಗಳನ್ನು ಸ್ವೀಕರಿಸಿರುತ್ತಾರೆ.

ಆ) ಸೂಕ್ತ ತನಿಖೆಯ ನಂತರ ಪಡಿತರ ಚೀಟಿಗಳನ್ನು ಅರ್ಹರಾದವರಿಗೆ ಆದಷ್ಟು ಜಾಗ್ರತೆ ನೀಡಲಾಗುತ್ತದೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ಅವಧಿ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ಲಿಖಿತ ಮೂಲಕ ಉತ್ತರಿಸಬೇಕಾದ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.